ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

13

ಇಲಾಖೆ / ವಿಷಯ : DEPARTMENT / SUBJECT:

ಪತ್ರಿಕೆಯ ಹೆಸರು : NAME OF THE NEWS PAPER: ದಿನಾಂಕ : DATE : 9/7/2020

# ಪರಿಸರ ಪೂರ್ವಾನುಮತಿ ಬೇಕಿಲ್ಲ!

## ಕೈಗಾರಿಕೆ, ರಸ್ತೆ ಸೇರಿ ಪ್ರಮುಖ ಯೋಜನೆಗಳ ನಿರ್ಮಾಣ ಪರಿಸರ ನಿಯಮ ಕರಡು ಅಧಿಸೂಚನೆ-2020 ಪ್ರಕಟ

■ **ವಿಕ ಸುದ್ದಿಲೋಕ** ಬೆಂಗಳೂರು

ಇಡೀ ದೇಶ ಕೊರೊನಾ ಅಬ್ಬರದಲ್ಲಿ ಮುಳುಗಿರುವಾಗಲೇ ಕೇಂದ್ರ ಸರಕಾರ ಸದ್ದಿಲ್ಲದೇ ಪರಿಸರ ನಿಯಮಗಳ ಬದಲಾವಣೆಗೆ ಸಿದ್ಧತೆ ನಡೆಸಿದೆ. ಕೈಗಾರಿಕೆ, ರಸ್ತೆ ಸೇರಿದಂತೆ ಪ್ರಮುಖ ನಿರ್ಮಾಣ ಕಾರ್ಯಗಳನ್ನು ಪರಿಸರ ಪೂರ್ವಾನುಮತಿ ಇಲ್ಲದೇ ಆರಂಭಿಸುವುದಕ್ಕೆ ಪರಿಸರ ಪರಿಣಾಮ ವಿಶ್ಲೇಷಣೆ ತಿದ್ದುಪಡಿ ಕಾಯಿದೆ ಕರಡು ಅಧಿಸೂಚನೆಯಲ್ಲಿ ಅವಕಾಶ ಕಲ್ಪಿಸಲಾಗಿದೆ.

ಈ ವಿವಾದಿತ ಕಾಯಿದೆ ತಿದ್ದುಪಡಿ ಕರಡನ್ನು ಕೇಂದ್ರ ಸರಕಾರ ಬಿಡುಗಡೆಗೊಳಿಸಿದೆ. 2006ರಲ್ಲಿ ಜಾರಿಗೆ ತಂದ ಕಾಯಿದೆ ಪರಿಷ್ಕರಣೆಗೆ ಕೇಂದ್ರ ಸರಕಾರ ಮುಂದಾಗಿದ್ದು, ಸಾಧಕ-ಬಾಧಕಗಳ ಬಗ್ಗೆ ಈಗ ಚರ್ಚೆ ಆರಂಭಗೊಂಡಿದೆ. ಒಂದೊಮ್ಮೆ ಈ ಕಾಯಿದೆ ಜಾರಿಗೆ ಬಂದರೆ ಉಷ್ಣ ವಿದ್ಯುತ್ ಸ್ಥಾವರ, ಅರಣ್ಯ ಪ್ರದೇಶದಲ್ಲಿ ರಸ್ತೆ ನಿರ್ಮಾಣ, ಖನಿಜ ನಿಕ್ಷೇಪ ಪತ್ತೆ, ಮೂಲಸೌಕರ್ಯ ಯೋಜನೆ, ಕೈಗಾರಿಕಾ ಸ್ಥಾಪನೆಗೆ ಪರಿಸರ ಪೂರ್ವಾನುಮತಿ ಅಡ್ಡಿ ಕೊಂಚ ಸಡಿಲವಾಗಲಿದೆ. ಆದರೆ ಇದರಿಂದ ಪರಿಸರದ ಮೇಲೆ ಅಡ್ಡ ಪರಿಣಾಮ ಉಂಟಾಗುವ ಸಾಧ್ಯತೆ ಹೆಚ್ಚಿದೆ.

### 40 ವಿಚಾರಗಳಿಗೆ ವಿನಾಯಿತಿ

**ಕರಡು ಅಧಿಸೂಚನೆಯಲ್ಲಿ 40 ಸ್ವರೂಪದ ಕೈಗಾರಿಕೆಗಳು ಹಾಗೂ ಮೂಲಸೌಕರ್ಯ ಯೋಜನೆ ಆರಂಭಿಸುವುದಕ್ಕೆ ಮುನ್ನ ಪರಿಸರ ಪೂರ್ವಾನುಮತಿ ಪಡೆಯುವುದಕ್ಕೆ ವಿನಾಯಿತಿ ನೀಡಲಾಗಿದೆ. ಒಂದೊಮ್ಮೆ ಈ ಕರಡು ಅಧಿಸೂಚನೆ ಕಾಯಿದೆ ರೂಪದಲ್ಲಿ ಅಸ್ತಿತ್ವಕ್ಕೆ ಬಂದರೆ 2016ರ ಅಪಾಯಕಾರಿ ತ್ಯಾಜ್ಯ ನಿಯಮ ಅನ್ವಯ ಪರವಾನಗಿ ಅಗತ್ಯವಾದ ಯೋಜನೆಗಳಿಗೂ ನಿರಾಯಾಸವಾಗಿ ಅನುಮತಿ ಲಭಿಸುತ್ತದೆ. ಈ ವಿನಾಯಿತಿಗಳ ಪಟ್ಟಿಯಲ್ಲಿ ಕೆಲ ಗುಡಿ ಕೈಗಾರಿಕೆಗಳು, ಕುಂಬಾರಿಕೆ ಘಟಕಗಳು, ಸೌರಶಕ್ತಿ ಪಾರ್ಕ್, 500 ಹೆಕ್ಟೇರ್ ವಿಸ್ತೀರ್ಣದ ಕೈಗಾರಿಕಾ ಎಸ್ಟೇಟ್, ಸತು, ತಾಮ್ರ, ಸೀಸ, ಆರ್ಸೆನಿಕ, ವ್ಯಾಂಡೇನಿಯಮ್ ಆ್ಯಸಿಡ್ ಬ್ಯಾಟರಿ ಮರುಬಳಕೆ ಘಟಕಕ್ಕೆ ವಿನಾಯಿತಿ ಲಭಿಸಲಿದೆ.**



### ಯಾವುದಕ್ಕೆ ಬದಲಾವಣೆ?

ಪೂರ್ವಾನುಮತಿ ನಿಯಮವನ್ನು ತೆಗೆದು ಹಾಕುವ ಜತೆಗೆ 2006ರ ಪರಿಸರದ ಮೇಲಿನ ಪರಿಣಾಮ ವಿಶ್ಲೇಷಣೆ ಅಧಿನಿಯಮದಲ್ಲಿರುವ ಕೆಲ ಪ್ರಮುಖ ನಿಯಮಗಳಿಗೆ ಈ ಕರಡಿನಲ್ಲಿ ತಿದ್ದುಪಡಿ ಮಾಡಲು ಉದ್ದೇಶಿಸಲಾಗಿದೆ.

- ರಾಷ್ಟ್ರೀಯ ಭದ್ರತೆ ಹಾಗೂ ಸೇನೆಗೆ ಸಂಬಂಧಪಟ್ಟಂತೆ ಕೇಂದ್ರ ಸರಕಾರ ರೂಪಿಸುವ ಯೋಜನೆಗಳ ವಿವರವನ್ನು ಸಾರ್ವಜನಿಕರಿಗೆ ತಿಳಿಸುವ ಅಗತ್ಯವಿಲ್ಲ.
- ಸಾರ್ವಜನಿಕ ಅಭಿಪ್ರಾಯ ಸಲ್ಲಿಸುವುದಕ್ಕೆ ಇದ್ದ 30 ದಿನಗಳ ಅವಕಾಶ 20 ದಿನಗಳಿಗೆ ಇಳಿಕೆ.
- ಸಾರ್ವಜನಿಕ ಅಭಿಪ್ರಾಯ ವಿಶ್ಲೇಷಣೆಗೆ ಜಿಲ್ಲಾಧಿಕಾರಿ ಅಥವಾ ಹೆಚ್ಚುವರಿ ಜಿಲ್ಲಾ ಸತ್ರ ನ್ಯಾಯಾಧೀಶರನ್ನು ಮಾತ್ರ ನೇಮಕ ಮಾಡಬೇಕೆಂಬ ನಿಯಮ ಸಡಿಲ. ಬದಲಿಗೆ ಕೆಳ ಹಂತದ ಅಧಿಕಾರಿಗಳಿಂದ ವಿಶ್ಲೇಷಣೆ.
- ಸಾರ್ವಜನಿಕ ಅಭಿಪ್ರಾಯವನ್ನು ಪ್ರಾಧಿಕಾರಕ್ಕೆ ಸಲ್ಲಿಸುವ 8 ದಿನಗಳ ಅವಧಿ 5 ದಿನಕ್ಕೆ ಇಳಿಕೆ.
- ನಿಯಮ ಪಾಲನಾ ವರದಿಯನ್ನು ವರ್ಷಕ್ಕೊಮ್ಮೆ ಸಲ್ಲಿಸಿದರೆ ಸಾಕು.

### ದುಷ್ಪರಿಣಾಮ ಖಚಿತ

ಉಷ್ಣ ವಿದ್ಯುತ್ ಸ್ಥಾವರದಂಥ ಭಾರಿ ಉದ್ಯಮ ಆರಂಭಕ್ಕೂ ಪರಿಸರ ಪೂರ್ವಾನುಮತಿ ಬೇಡ ಎಂದು ಕರಡಿನಲ್ಲಿ ಉಲ್ಲೇಖಿಸಲಾಗಿದೆ. ಇದರಿಂದ ಭಾರಿ ಪ್ರಮಾಣದಲ್ಲಿ ದುಷ್ಪರಿಣಾಮ ಖಚಿತ.

### ಬಿಸಿಯೇರದ ವಿರೋಧ

ಕೇಂದ್ರ ಪರಿಸರ ನಿಯಮ ಬದಲಾವಣೆ ಮಾಡಲು ನಡೆಸುತ್ತಿರುವ ಪ್ರಯತ್ನದ ಬಗ್ಗೆ ಅಲ್ಲಲ್ಲಿ ಮಾಹಿತಿ ಸುಳಿದಾಡಿದೆಯಾದರೂ ಕೊರೊನಾ ಅಬ್ಬರದ ಮಧ್ಯೆ ಕರಡು ಸಿದ್ಧಗೊಂಡಿರುವುದು ಅಷ್ಟೇನೂ ಗಮನ ಸೆಳೆದಿಲ್ಲ. ಆದಾಗಿಯೂ ಅಲ್ಲಲ್ಲಿ ಚರ್ಚೆಗಳು ಆರಂಭಗೊಂಡಿದ್ದು, ಕಾನೂನು ಹೋರಾಟದ ಬಗ್ಗೆಯೂ ಚಿಂತನೆ ನಡೆಯುತ್ತಿದೆ.